

# ತೇಲುವ ಮಹಾನಗರ

ಕರ್ನಾಟಕದ ಕರಾವಳಿಯಲ್ಲಿ ಸಮುದ್ರ ಕೊರೆತದಿಂದ ತೀರ ಪ್ರದೇಶಗಳು ಸಮುದ್ರದಲ್ಲಿ ಮುಳುಗುವ ಸುದ್ದಿ ಆಗಾಗ್ಗೆ ಓದುತ್ತಿರುತ್ತೇವೆ. ಇದರಿಂದ ನಾವು ಪ್ರಕೃತಿಯ ವೈರುಧ್ಯವನ್ನು ಎದುರಿಸುವುದು ಅಸಾಧ್ಯವೆಂಬುದು ಸತ್ಯ. ಆದರೆ ಪ್ರಕೃತಿಯನ್ನು ನಮಗೆ ಬೇಕಾದಂತೆ ಮಣಿಸುವ, ನೀರು ಹೆಚ್ಚಿದ್ದಾಗ ಅದರಿಂದ ತೊಂದರೆಗೊಳಗಾಗುವವರು ನೀರಿನ ಮೇಲೆಯೇ ಜೀವಿಸುವಂತಹ ವ್ಯವಸ್ಥೆಯನ್ನು ಮಾಡಿಕೊಳ್ಳುವ ತಂತ್ರಜ್ಞಾನವೂ ಇದೀಗ ರೂಪುಗೊಂಡಿದೆ.

ಹೌದು ನ್ಯೂ ಆರ್ಲನ್ಸ್ ಆರ್ಕಾಲಜಿ ಹೆಬಿಟಾಟ್ ಹೆಸರಿನಲ್ಲಿ ಮಿಸಿಪಿಪ್ಪಿ ನದಿ ತೀರದಲ್ಲೊಂದು ಇಂಥದ್ದೊಂದು ತೇಲುವ ಮಹಾನಗರ ನಿರ್ಮಾಣಗೊಳ್ಳುತ್ತಿದೆ. ಒಂದೇ ಮೆಗಾ ಕಟ್ಟಡವಿದ್ದು ಅದರಲ್ಲಿ ಆ ನಗರದ ಜನರೆಲ್ಲರೂ ತಮಗೆ ಬೇಕಾದ ಸೌಕರ್ಯಗಳೊಂದಿಗೆ ಮತ್ತು ತಮಗೆ ಬೇಕಾದ ಸೇವೆಗಳನ್ನು ಪಡೆಯಬಹುದು.

ನ್ಯೂ ಆರ್ಲನ್ಸ್ ನಗರ ಸಮುದ್ರ ಮಟ್ಟಕ್ಕಿಂತಲೂ ಕೆಳಗಿರುವ ನಗರವಾಗಿದ್ದು, ಪದೇ ಪದೇ ಬಿರುಗಾಳಿಯಿಂದ ಹಾನಿಗೊಳಗಾಗುತ್ತಿದೆ. ಇದರಿಂದ ಯೋಜಕರು ಅದನ್ನು ಒಂದು ತೇಲುವ ತ್ರಿಕೋನಾಕಾರದ ಚೌಕಟ್ಟಿನ ಆಕಾರದಲ್ಲಿ ನಿರ್ಮಿಸಲು ಯೋಜಿಸಿದರು. ಈ ತ್ರಿಕೋನಾಕಾರದಿಂದಾಗಿ ಎಷ್ಟೇ ವೇಗವಾಗಿ ಗಾಳಿ ಬೀಸಿದರೂ ಅದನ್ನು ತಡೆದುಕೊಳ್ಳಲು ಸಾಧ್ಯವಾಗುತ್ತದೆ. ಇಷ್ಟಲ್ಲದೇ ಈ ಮಹಾ ಕಟ್ಟಡದ ಅಂಚು ಮತ್ತು ವಾಲುವಿಕೆಗಳನ್ನು ಬಿರುಗಾಳಿ ಬೀಸಿದರೂ ಗಾಳಿ ಚದುರುವಂತೆ ಯೋಜಿಸಲಾಗಿದೆ. ಈ ಕಟ್ಟಡವನ್ನು ಮಿಸಿಪಿಪ್ಪಿ ನದಿಯಲ್ಲಿಯೇ ನಿರ್ಮಿಸುವ ಬದಲು ನದಿ ದಡವನ್ನು 366 ಮೀಟರ್ ಉದ್ದಗಲ ಮತ್ತು 76 ಮೀಟರ್ ಆಳ ಕೊರೆದು ಸರೋವರ ನಿರ್ಮಿಸಿ ಈ ಸರೋವರದಲ್ಲಿ ಮತ್ತು ನದಿಯಲ್ಲಿಯೂ ಚಾಚಿಕೊಂಡಿರುವಂತೆ ಈ ಮಹಾನಗರವನ್ನು ನಿರ್ಮಿಸಲಾಗುತ್ತಿದೆ.

ಈ ಮಹಾನಗರದ ಬುನಾದಿ ಕೊರೆದ ಸರೋವರದಲ್ಲಿ ಬಹುಕುಳಿಗಳುಳ್ಳ ಶಕ್ತಿಶಾಲಿ ಕಾಂಕ್ರೀಟ್‌ನ 40 ಇಂಚು 40 ಇಂಚು ಅಳತೆಯ ಮ್ಯಾಟ್ರಿಕ್ಸ್ ಸೆಲ್‌ಗಳನ್ನು ಹೊಂದಿರುತ್ತದೆ. ಇವುಗಳನ್ನು ನೀರಿನ ಮೇಲೆ ತೇಲುವಂತೆ ಒಟ್ಟಾಗಿ ಅಳವಡಿಸಿ ಮೇಲೆ ಸ್ಟೀಲ್ ಫ್ರೇಮ್‌ನ ಮಹಾಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಕಾಂಕ್ರೀಟ್ ಮ್ಯಾಟ್ರಿಕ್ಸ್ ಸೆಲ್‌ಗಳು ಸರೋವರದಲ್ಲಿ 55 ಮೀಟರ್‌ವರೆಗೂ ಮುಳುಗಿದ್ದು, ಸರೋವರದ ತಳದಿಂದ 15–20 ಮೀಟರ್ ಅಂತರದಲ್ಲಿ ನೀರಿನಲ್ಲಿ ತೇಲುತ್ತಿರುತ್ತವೆ.

ಮೂರು ಮುಖ್ಯ ಗೋಪುರಗಳನ್ನು ಹೊಂದಿದ ಈ ಮಹಾಕಟ್ಟಡದಲ್ಲಿ ಪ್ರತಿ 30 ಮಹಡಿಗೆ ಒಂದರಂತೆ ಗಗನ ಉದ್ಯಾನವನಗಳನ್ನೂ ನಿರ್ಮಿಸಿ ಸಮುದಾಯದ ವಿಹಾರಕ್ಕೆ ಅನುಕೂಲ ಮಾಡಿಕೊಡಲಾಗುತ್ತದೆ.

ಈ ಕಟ್ಟಡ ನಗರಕ್ಕೆ ಕಾರುಗಳ ಅವಶ್ಯಕತೆ ಇಲ್ಲದಿದ್ದರೂ, ಬುನಾದಿಯಲ್ಲಿಯೇ 8000 ಕಾರುಗಳ ಸಾಮರ್ಥ್ಯದ ಪಾರ್ಕಿಂಗ್ ಗ್ಯಾರೇಜನ್ನೂ ನಿರ್ಮಿಸಲಾಗುತ್ತದೆ. ಇದು ಈ ಕಟ್ಟಡ ನಗರದೊಳಗೆ ಬರುವವರಿಗೆ ಮತ್ತು ಹೊರಹೋಗುವವರ ಅನುಕೂಲಕ್ಕಾಗಿ. ಈ ಮಹಾಕಟ್ಟಡದ ವಿದ್ಯುತ್ ವ್ಯವಸ್ಥೆಗಾಗಿ ಕಾರ್ಬನ್ ರಹಿತ ಸೌರಶಕ್ತಿ ಫಲಕಗಳು, ಗಾಳಿ ವಿದ್ಯುತ್ ಯಂತ್ರಗಳು, ನದಿ ನೀರಿನ ಹರಿವಿನಿಂದಲೇ ವಿದ್ಯುತ್ ಉತ್ಪಾದಿಸುವ ಟರ್ಬೈನ್‌ಗಳು ಇವೆಲ್ಲವುಗಳನ್ನೂ ಅಳವಡಿಸಲಾಗುತ್ತದೆ. ಇವುಗಳ ಜೊತೆಗೆ ಗಗನ ಉದ್ಯಾನವನಗಳ ಉಷ್ಣತೆಯನ್ನು ಹೆಚ್ಚಿಸುವ/ಇಳಿಸುವ ವ್ಯವಸ್ಥೆ, ಅಶುದ್ಧ ನೀರನ್ನು ಶುದ್ಧೀಕರಿಸುವ ವ್ಯವಸ್ಥೆ, ಶುದ್ಧ ನೀರನ್ನು ಪಡೆಯುವ ಮತ್ತು ಸಂಗ್ರಹಿಸುವ ವ್ಯವಸ್ಥೆಗಳನ್ನೂ ಹೊಂದಲಿದೆ.

■ ಜಯಶ್ರೀ ಎಲ್. ಜವಳಿ